ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

UNIVERSITY OF HORTICULTURAL SCIENCES, BAGALKOT

ICAR - KRISHI VIGYAN KENDRA, KOLAR

ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ

भा.कृ.अ.प- कृषि विज्ञान केंद्र, कोलार



ಸಂಚಿಕೆ: 02 | ಜುಲೈ – ಸೆಪ್ಟೆಂಬರ್, 2020 ಇ–ವಾರ್ತಾ ಪತ್ರಿಕೆ | ಸಂಪುಟ: 11

## ಗೌರವಾನ್ವಿತ ಕುಲಪತಿಗಳ ನುಡಿ



ಡಾ. ಕೆ. ಎಮ್. ಇಂದಿರೇಶ್

ಕೋವಿಡ್ ವಿಷಯ ಸ್ಥಿತಿಯಲ್ಲಿಯೂ ಸಹ ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಜಿಲ್ಲೆಯ ವಿವಿಧ ಪ್ರಮುಖ ಬೆಳೆಗಳ ಕುರಿತು 7 ಹೊರಾಂಗಣ ತರಬೇತಿ ಕಾರ್ಯಕ್ರಮಗಳು, 12 ಅಂತರ್ಜಾಲ ಕಾರ್ಯಾಗಾರಗಳು, 3 ಗುಂಪು ಚರ್ಚೆ, ಒಂದು ರೇಡಿಯೋ ಕಾರ್ಯಕ್ರಮ, 10 ಪದ್ಧತಿ ಪ್ರಾತ್ಯಕ್ಷಿಕೆಗಳು, 3 ಹವಾಮಾನ ಆಧಾರಿತ ಆಪ್‌ಗಳ ಕುರಿತು ಅರಿವು ಕಾರ್ಯಕ್ರಮಗಳು, 10 ಮುಂಚೂಣಿ ಪ್ರಾತ್ಯಕ್ಷಿಕೆಗಳು, 3 ಸಮಸ್ಯಾತ್ಮಕ ತಾಕುಗಳ ಭೇಟಿ, 3 ತಂತ್ರಜ್ಞಾನ ಮರುಪರಿಶೀಲನೆ ಹಾಗೂ 1 ವಾರಗಳ ಕಾಲ ಪಾರ್ಥೇನಿಯಂ ನಿರ್ಮೂಲನೆ ಅರಿವು ಕಾರ್ಯಕ್ರಮ, ಪೋಷಣ್ ಮಾಹೆ ಆಚರಣೆ, 150ನೇ ಗಾಂಧೀಜಿಯವರ ಜನ್ಮದಿನಾಚರಣೆ ಕಾರ್ಯಕ್ರಮಗಳು ಮತ್ತು ಪೌಷ್ಠಿಕ ಕೈತೋಟ ಹಾಗೂ ಪರಂಪರಾಗತ ಕೃಷಿ ವಿಕಾಸ್ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದು. ತೋಟಗಾರಿಕಾ ಸಂಪನ್ಮೂಲಗಳು ಮತ್ತು ಕೋವಿಡ್–19 ವಿರುದ್ದ ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಂಪನ್ಮೂಲಗಳ ಪಾತ್ರ ಎಂಬ ಒಂದು ದಿನದ ರಾಷ್ಟ್ರೀಯ ಅಂತರ್ಜಾಲ ಕಾರ್ಯಾಗಾರವನ್ನು ಯಶಸ್ವಿಯಾಗಿ ಜಾರಿಗೊಳಿಸಿರುವುದು ಹೆಮ್ಮೆಯ ಸಂಗತಿ. ಕೃಷಿ ವಿಜ್ಞಾನ ಕೇಂದ್ರವು ರೈತರಿಗೆ ತಂತ್ರಜ್ಞಾನಗಳನ್ನು ತಲುಪಿಸಲು ಇನ್ನು ಹೆಚ್ಚಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಆಶಿಸುತ್ತೇನೆ.

## ನಾಲ್ಕನೇಯ ವೈಜ್ಞಾನಿಕ ಸಲಹಾ ಸಮಿತಿ ಸಭೆ

ನಾಲ್ಕನೇಯ ವೈಜ್ಞಾನಿಕ ಸಲಹಾ ಸಮಿತಿ ಸಭೆಯು ದಿನಾಂಕ 07.07.2020 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಆಯೋಜಿಸಿತ್ತು. ಡಾ. ಎಂ.ಜೆ. ಚಂದ್ರೇಗೌಡ, ನಿರ್ದೇಶಕರು, ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ಮುಖ್ಯ ಅಥಿತಿಗಳಾಗಿದ್ದರು. ಡಾ. ಕೆ.ಎಂ. ಇಂದಿರೇಶ, ಗೌರವಾನ್ವಿತ ಉಪಕುಲಪತಿಗಳು ತೋ.ವಿ.ವಿ. ಬಾಗಲಕೋಟೆ ಈ ಸಭೆಯ ಸಭಾಧ್ಯಕ್ಷರಾಗಿದ್ದು ಮತ್ತು ಡಾ. ವೈ.ಕೆ. ಕೋಟಿಕಲ್, ವಿಸ್ತರಣಾ ನಿರ್ದೇಶಕರು, ತೋ.ವಿ.ವಿ., ಬಾಗಲಕೋಟೆ ರವರು ಅಂತರ್ಜಾಲದ ಮೂಲಕ ಭಾಗವಹಿಸಿದ್ದರು. 25 ವಿವಿಧ ಇಲಾಖೆ ಮುಖ್ಯಸ್ಥರು, ರೈತ ಪ್ರತಿನಿಧಿಗಳು ಮತ್ತು ಪ್ರಗತಿಪರ ರೈತರು ಭಾಗವಹಿಸಿ ಸೂಕ್ತ ಸಲಹೆಗಳನ್ನು ಸೂಚಿಸಿದರು.





ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಜಿಲ್ಲೆಯ ಕೃಷಿಗೆ ಸಂಬಂಧಿಸಿದ ಪಕ್ಷಿನೋಟ ಮತ್ತು ಕಳೆದ ಸಭೆಯ ಕ್ರಮ ತೆಗೆದುಕೊಂಡ ವರದಿ ಹಾಗೂ ಎಲ್ಲ ವಿಜ್ಞಾನಿಗಳು 2017-18, 2018-19 ಮತ್ತು 2019-20 ಸಾಲಿನ ವರದಿಯನ್ನು ಮಂಡಿಸಿದರು. ಭಾಗವಹಿಸಿದ ಎಲ್ಲ ಸದಸ್ಯರುಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರಾತ್ಯಕ್ಷಿಕೆ ಹಾಗೂ ತರಬೇತಿಗಳನ್ನು ಹಮ್ಮಿಕೊಳ್ಳುವಂತೆ ನಿರ್ಣಯ ಕೈಗೊಳ್ಳಲಾಯಿತು.

## ತರಬೇತಿ ಕಾರ್ಯಕ್ರಮಗಳು



- "ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಊಜಿ ನೊಣದ ನಿರ್ವಹಣೆಗೆ ಲಿಂಗಾರ್ಷಕ ಬಲೆಗಳ ಬಳಕೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಡಾ. ಶಶಿಧರ್ ಕೆ. ಆರ್. ವಿಜ್ಞಾನಿ (ರೇಷ್ಮೆ ಕೃಷಿ) ರವರು ದಿನಾಂಕ: 28.07.2020 ರಂದು ಬಂಗಾರಪೇಟೆ ತಾಲ್ಲೂಕಿನ ಮುತನೂರು ಗ್ರಾಮದಲ್ಲಿ ಹಮಿಕ್ಕೊಕೊಂಡಿದ್ದರು. ಡಾ. ಅನಿಲಕುಮಾರ್ ಎಸ್. ವಿಜ್ಞಾನಿ (ಮಣ್ಣು ವಿಜ್ಞಾನ) ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 40 ರೈತರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



- ದಿನಾಂಕ: 01.09.2020 ರಂದು ಕೃಷಿ ಇಲಾಖೆ, ಮಾಲೂರ ರವರು ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಡಾ. ಅಂಬಿಕಾ, ಡಿ. ಎಸ್. ವಿಜ್ಞಾನಿ (ಸಸ್ಯ ಸಂರಕ್ಷಣೆ) ರವರು "ಬೀಜೋಪಚಾರ ಮತ್ತು ಪೀಡೆನಾಶಕಗಳ ಸುರಕ್ಷಿತ ಬಳಕೆ" ಗಳ ಕುರಿತು ತರಬೇತಿ ನೀಡಿದರು. ಸುಮಾರು 50 ಜನ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



- ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ರೇಷ್ಮೆ ಇಲಾಖೆ, ಬಂಗಾರಪೇಟೆ ಸಹಯೋಗದಲ್ಲಿ "ಹಿಪ್ಪುನೇರಳೆ ಬೆಳೆಯ ಸಮಗ್ರ ನಿರ್ವಹಣೆ" ಎಂಬ ವಿಷಯದ ಕುರಿತು ತರಬೇತಿಯನ್ನು ಬಂಗಾರಪೇಟೆ ತಾಲ್ಲೂಕಿನ ಮುತ್ತನೂರು ಗ್ರಾಮದಲ್ಲಿ ದಿನಾಂಕ 03.09.2020 ರಂದು ಹಮ್ಮಿಕೊಳ್ಳಲಾಗಿತ್ತು. ಡಾ. ಶಶಿಧರ್ ಕೆ. ಆರ್., ಡಾ. ಅನಿಲಕುಮಾರ್ ಎಸ್. ಮತ್ತು ಶ್ರೀ. ಎಸ್. ಎನ್. ಶ್ರೀನಿವಾಸಕುಮಾರ, ರೇಷ್ಮೆ ಸಹಾಯಕ ನಿರ್ದೇಶಕರು, ಶ್ರೀನಿವಾಸಪುರರವರು ಪಾಲ್ಗೊಂಡಿದ್ದರು ಹಾಗೂ ಈ ಕಾರ್ಯಕ್ರಮದಲ್ಲಿ ಸುಮಾರು 75 ಜನರು ಭಾಗವಹಿಸಿದ್ದರು.



- ಡಾ. ಜ್ಯೋತಿ ಕಟ್ಟೇಗೌಡರ್ ರವರು ದಿನಾಂಕ: 08.09.2020 ರಂದು "ಮಾವಿನಲ್ಲಿ ಜುಲೈ ತಿಂಗಳಿಂದ ಅಕ್ಟೋಬರ್ ತಿಂಗಳವರೆಗೆ ಕೈಗೊಳ್ಳಬೇಕಾದ ಅವಶ್ಯ ನಿರ್ವಹಣಾ ಕ್ರಮಗಳ" ಕುರಿತು ಶ್ರೀನಿವಾಸಪುರ ತಾಲ್ಲೂಕಿನ ಕಾಡುದೇವಾಂಡನಹಳ್ಳಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಡಾ. ಜ್ಯೋತಿ ಕಟ್ಟೇಗೌಡರ ವಿಜ್ಞಾನಿ (ತೋಟಗಾರಿಕೆ) ರವರು ಬೆಳೆಯ ವಿವಿಧ ನಿರ್ವಹಣಾ ಕ್ರಮಗಳಾದ ಸವರುವಿಕೆ, ಪೋಷಕಾಂಶಗಳ ಬಳಕೆ, ಪುನಃಶ್ಚೇತನ, ಪಾತಿಗಳ ನಿರ್ಮಾಣ ಹಾಗೂ ಇತ್ಯಾದಿ ವಿಷಯಗಳ ಕುರಿತು ಮಂಡಿಸಿದರು. ತದನಂತರ ಡಾ. ಅಂಬಿಕಾ, ಡಿ. ಎಸ್. ರವರು ಮಾವಿನಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳ ಕುರಿತು ವಿಸ್ತಾರವಾಗಿ ತರಬೇತಿ ನೀಡಿದರು.



- ದಿನಾಂಕ 11.09.2020 ರಂದು ಶ್ರೀನಿವಾಸಪುರ ತಾಲ್ಲೂಕಿನ ಕಾಡುದೇವಾಂಡಹಳ್ಳಿಯಲ್ಲಿ ಡಾ. ಶಶಿಧರ್ ಕೆ. ಆರ್. ರವರು "ಉತ್ತಮ ಗುಣಮಟ್ಟದ ಗೂಡುಗಳ ಉತ್ಪಾದನೆಯಲ್ಲಿ ಸೂಕ್ತ ದ್ವಿತಳಿ ರೇಷ್ಮೆ ಸಂಕರಣ ತಳಿಗಳ ಬಳಕೆ" ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಶ್ರೀ. ಎಂ. ಆಂಜನೇಯಗೌಡ, ರೇಷ್ಮೆ ಉಪ ನಿರ್ದೇಶಕರು, ಕೋಲಾರ, ಶ್ರೀ. ನಾಗರಾಜ, ರೇಷ್ಮೆ ಸಹಾಯಕ ನಿರ್ದೇಶಕರು, ಶ್ರೀನಿವಾಸಪುರ ಮತ್ತು ಶ್ರೀ. ವಿಜಯಕುಮಾರ್, ಸೇರಿಕೇರ್ ಹೆಲ್ತ್ ಲೈನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ರವರು ಭಾಗವಹಿಸಿದ್ದರು. ಸುಮಾರು 40 ರೈತರು ಈ ತರಬೇತಿಯ ಸದುಪಯೋಗ ಪಡೆದುಕೊಂಡರು.



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ತೋಟಗಾರಿಕೆ ಇಲಾಖೆ, ಮಾಲೂರು ಜಂಟಿಯಾಗಿ ದಿನಾಂಕ: 22.09.2020 ರಂದು ಆಲೂಗಡ್ಡೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ತರಬೇತಿಯನ್ನು ತಿಪ್ಪಸಂದ್ರ ಗ್ರಾಮ, ಮಾಲೂರು ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಜ್ಯೋತಿ ಕಟ್ಟೇಗೌಡರ ರವರು ಆಲೂಗಡ್ಡೆ ಬೆಳೆಯ ಬೇಸಾಯ ಪದ್ಧತಿಗಳು, ಡಾ. ಅನಿಲಕುಮಾರ್ ಎಸ್. ರವರು ಆಲೂಗಡ್ಡೆಯಲ್ಲಿ ಪೊಷಕಾಂಶಗಳ ನಿರ್ವಹಣೆ ಮತ್ತು ಡಾ. ಅಂಬಿಕಾ, ಡಿ. ಎಸ್. ರವರು ಸಮಗ್ರ ಪೀಡೆ ನಿರ್ವಹಣೆ ಕುರಿತು ಚರ್ಚಿಸಿದರು. ಶ್ರೀಮತಿ ಶಿಲ್ಪಶ್ರೀ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮಾಲೂರು ರವರು ಮಾತನಾಡಿ, ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳಲು ಮತ್ತು ಬೆಳೆ ವಿಮೆ ಬಗ್ಗೆ ಮಾತನಾಡಿದರು. ಸುಮಾರು 30 ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

- ದಿನಾಂಕ 23.09.2020 ರಂದು ಹೊಸಕೋಟೆ ತಾಲೂಕಿನ ಸೂಲಿಬೆಲೆ ಗ್ರಾಮದಲ್ಲಿ ರೇಷ್ಮೆ ಇಲಾಖೆ ಹಾಗು ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರ, ಸೂಡತಿ ಸಹಯೋಗದಲ್ಲಿ "ಹಿಪ್ಪುನೇರಳೆಯಲ್ಲಿ ಉತ್ತಮ ಗುಣಮಟ್ಟದ ಎಲೆಗಳನ್ನು ಪಡೆಯಲು ಸವರುವಿಕೆ" ಎಂಬ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳಲಾಗಿತ್ತು. ಡಾ. ಶಶಿಧರ್ ಕೆ. ಆರ್. ರವರು ವಿಷಯದ ಕುರಿತು ತರಬೇತಿ ನೀಡಿದರು. ಡಾ. ಅನಿಲಕುಮಾರ್ ಎಸ್. ರವರು ಹಿಪ್ಪುನೇರಳೆ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಸುಮಾರು 125 ಜನ ರೈತರು ಮತ್ತು 25 ಜನ ಅಧಿಕಾರಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು.



## ಅಂತರ್ಜಾಲ ಕಾರ್ಯಾಗಾರಗಳು

ಕೋಲಾರ ಜಿಲ್ಲೆಯಲ್ಲಿ ಮುಖ್ಯವಾಗಿ ಬೆಳೆಯುವಂತಹ ಬೆಳೆಗಳು ಮತ್ತು ವಾಣಿಜ್ಯ ತೋಟಗಾರಿಕೆ ಬೆಳೆಗಳ ಮಹತ್ವವನ್ನು ಮನಗಂಡು ಕೋವಿಡ್ ವಿಷಮ ಪರಿಸ್ಥಿತಿಯಲ್ಲಿ ಅಂತರ್ಜಾಲ ತರಬೇತಿ ಕಾರ್ಯಕ್ರಮಗಳನ್ನು ವಿವಿಧ ಸಂಸ್ಥೆಗಳ ಹಾಗು ಇಲಾಖೆಗಳ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡು ಅಂತರ್ಜಾಲ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರಗಳ ವಿವರವು ಈ ಕೆಳಕಂಡಂತಿದೆ.








| ದಿನಾಂಕ | ವಿವರ | ಸಂಪನ್ಮೂಲ ವ್ಯಕ್ತಿಗಳು | ಸಂಯೋಜಕರು | ಭಾಗವಹಿಸಿದ ರೈತರ ಸಂಖ್ಯೆ | ವಿಸ್ತರಣಾ ಅಧಿಕಾರಿಗಳ ಸಂಖ್ಯೆ |
|---|---|---|---|---|---|
| 10.07.2020 | ಟೊಮ್ಯಾಟೊ ಬೆಳೆಯ ರೋಗಗಳ ನಿರ್ವಹಣೆ | ಡಾ. ಟಿ.ಬಿ. ಮಂಜುನಾಥ ರೆಡ್ಡಿ, ಸಹಾಯಕ ಪ್ರಾಧ್ಯಾಪಕರು, ಸಸ್ಯರೋಗ ಶಾಸ್ತ್ರ, ತೋ.ಮ.ವಿ. ಕೋಲಾರ | ಡಾ. ಅನಿಲಕುಮಾರ ಎಸ್.<br>ಶ್ರೀ. ಕೆ. ತುಳಸಿರಾಮ್ | 20 | 05 |
| 27.07.2020 | ವೈಜ್ಞಾನಿಕ ದಾಳಿಂಬೆ ಕೃಷಿ | ಡಾ. ಮಂಜುನಾಥ ಜಿ. ಸಹಾಯಕ ಪ್ರಾಧ್ಯಾಪಕರು, ಸಸ್ಯರೋಗ ಶಾಸ್ತ್ರ, ತೋ.ಮ.ವಿ. ಮೈಸೂರು. | ಡಾ. ಅನಿಲಕುಮಾರ ಎಸ್.<br>ಶ್ರೀ. ಕೆ. ತುಳಸಿರಾಮ್ | 40 | 10 |
| 29.07.2020 | ಕೋವಿಡ್ – 19ರ ಪರಿಸ್ಥಿತಿಯಲ್ಲಿ ದ್ವಿತಳಿ ರೇಷ್ಮೆಹುಳು ಸಾಕಾಣಿಕೆಯಲ್ಲಿ ಕೈಗೊಳ್ಳಬೇಕಾದ ನಿರ್ವಹಣಾ ಕ್ರಮಗಳು | ಶ್ರೀ. ಎಂ.ಕೆ ಪ್ರಭಾಕರ್, ರೇಷ್ಮೆ ಉಪನಿರ್ದೇಶಕರು, ಜಿ. ಪಂ. ಕೋಲಾರ.<br>ಡಾ. ನೊಬಲ್ ಮೊರಿಸನ್, ವಿಜ್ಞಾನಿಗಳು 'ಡಿ', CSB, ಬೆಂಗಳೂರು.<br>ಡಾ.ಜಿ.ಬಿ. ನರೇಂದ್ರ ಕುಮಾರ್, ವಿಜ್ಞಾನಿಗಳು 'ಡಿ', REC, ಮಡಿವಾಳ | ಡಾ. ಶಶಿಧರ್ ಕೆ.ಆರ್.<br>ಡಾ. ಅನಿಲಕುಮಾರ ಎಸ್. | 50 | 05 |
| 04.08.2020 | ಸೋಲನೇಸಿ ತರಕಾರಿ ಬೆಳೆಗಳಲ್ಲಿ ಸಮಗ್ರ ರೋಗಗಳ ನಿರ್ವಹಣೆ | ಡಾ. ನಾಗರಾಜ್ ಎನ್, ಪ್ರಾಧ್ಯಾಪಕರು, ಸಸ್ಯರೋಗ ಶಾಸ್ತ್ರ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು. | ಡಾ. ಅಂಬಿಕಾ ಡಿ.ಎಸ್. | 20 | 10 |
| 13.08.2020 | ಮಾವಿನಲ್ಲಿ ಕೊಯ್ಲು ನಂತರದ ಅವಶ್ಯ ನಿರ್ವಹಣಾ ಕ್ರಮಗಳು | ಡಾ. ಎಸ್.ವಿ. ಹಿತ್ತಲಮನಿ, ನಿವೃತ್ತ ಹೆಚ್ಚುವರಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.<br>ಶ್ರೀ. ನಾಗರಾಜ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಾವು ಮಾರುಕಟ್ಟೆ ಮತ್ತು ಅಭಿವೃದ್ಧಿ ನಿಗಮ, ಬೆಂಗಳೂರು | ಡಾ. ಜ್ಯೋತಿ ಕಟ್ಟೆಗೌಡರ್<br>ಶ್ರೀ. ಕೆ. ತುಳಸಿರಾಮ್ | 50 | 12 |
| 14.08.2020 | ಸುಸ್ಥಿರ ಆದಾಯಕ್ಕೆ ಸಾವಯವ ರೇಷ್ಮೆ ಕೃಷಿ | ಶ್ರೀ. ಡಿ.ಎಂ. ಆಂಜನೇಯಗೌಡ, ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ಕೋಲಾರ.<br>ಶ್ರೀ. ಮಂಜುನಾಥ ಎಂ | ಡಾ. ಶಶಿಧರ್ ಕೆ.ಆರ್.<br>ಶ್ರೀ. ಕೆ. ತುಳಸಿರಾಮ್ | 40 | 10 |
| 17.08.2020 | ವೈಜ್ಞಾನಿಕ ಶುಂಠಿ ಬೇಸಾಯ | ಡಾ. ಜ್ಯೋತಿ ಕಟ್ಟೆಗೌಡರ್, ವಿಜ್ಞಾನಿ (ತೋಟಗಾರಿಕೆ), ಕೃಷಿ ವಿಜ್ಞಾನ ಕೇಂದ್ರ, ಕೋಲಾರ<br>ಡಾ. ಅನಿಲಕುಮಾರ ಎಸ್. ವಿಜ್ಞಾನಿ (ಮಣ್ಣು ವಿಜ್ಞಾನ), ಕೃಷಿ ವಿಜ್ಞಾನ ಕೇಂದ್ರ, ಕೋಲಾರ<br>ಡಾ. ಅಂಬಿಕಾ ಡಿ.ಎಸ್., ವಿಜ್ಞಾನಿ (ಸಸ್ಯ ಸಂರಕ್ಷಣೆ), ಕೃಷಿ ವಿಜ್ಞಾನ ಕೇಂದ್ರ, ಕೋಲಾರ | ಡಾ. ಅನಿಲಕುಮಾರ ಎಸ್.<br>ಡಾ. ಅಂಬಿಕಾ ಡಿ.ಎಸ್. | 40 | 06 |
| 19.08.2020 | ರೈತರ ಆದಾಯ ದ್ವಿಗುಣಗೊಳಿಸುವಿಕೆಯಲ್ಲಿ ದ್ವಿತಳಿ ರೇಷ್ಮೆ ಕೃಷಿಯ ಪ್ರಾಮುಖ್ಯತೆ | ಶ್ರೀ. ಎಸ್.ಎನ್. ಶ್ರೀನಿವಾಸ, ರೇಷ್ಮೆ ಸಹಾ ನಿರ್ದೇಶಕರು, ಬಂಗಾರಪೇಟೆ<br>ಶ್ರೀ. ವೆಂಕಟಾಚಲಪತಿ, ಪ್ರಗತಿಪರ ದ್ವಿತಳಿ ಬೆಳೆಗಾರರು, ಬಂಗಾರಪೇಟೆ | ಡಾ. ಶಶಿಧರ್ ಕೆ.ಆರ್.<br>ಡಾ. ಅನಿಲಕುಮಾರ್ ಎಸ್. | 40 | 05 |
| 02.09.2020 | ರೇಷ್ಮೆ ಕೃಷಿಯಲ್ಲಿ ಸಮಗ್ರ ಪೀಡೆ ನಿರ್ವಹಣೆ | ಶ್ರೀ. ಆಂಜನೇಯಗೌಡ, ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ಕೋಲಾರ. ಡಾ. ನರೇಂದ್ರಕುಮಾರ್<br>ಡಾ. ಎಮ್. ಮಹೇಶ್<br>ಶ್ರೀ. ಶ್ರೀನಿವಾಸ, ಪ್ರಗತಿಪರ ದ್ವಿತಳಿ ಬೆಳೆಗಾರರು, ನಾಗನಾಳ | ಡಾ. ಶಶಿಧರ್ ಕೆ.ಆರ್.<br>ಡಾ. ಅಂಬಿಕಾ ಡಿ.ಎಸ್. | 40 | 05 |
| 09.09.2020 | ಟೊಮ್ಯಾಟೊ ಬೆಳೆಯಲ್ಲಿ ಟ್ಯೂಟಾ ಕೀಟದ ಸಮಗ್ರ ನಿರ್ವಹಣೆ | ಡಾ. ಶ್ರೀಧರ ವಿ. ಪ್ರಧಾನ ಸಂಶೋಧಕರು, ಕೀಟಶಾಸ್ತ್ರ ವಿಭಾಗ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು. | ಡಾ. ಅಂಬಿಕಾ ಡಿ.ಎಸ್.<br>ಶ್ರೀ. ಕೆ. ತುಳಸಿರಾಮ್ | 35 | 05 |
| 25.09.2020 | ಗೋಡಂಬಿ ಬೆಳೆಯ ಬೇಸಾಯ ಕ್ರಮಗಳು | ಡಾ. ಟಿ. ಗುರುಪ್ರಸಾದ, ನಿವೃತ್ತ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ತೋವಿವಿ, ಬಾಗಲಕೋಟೆ.<br>ಶ್ರೀ. ಕೆ ತುಳಸಿರಾಮ್, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ | ಡಾ. ಜ್ಯೋತಿ ಕಟ್ಟೆಗೌಡರ್<br>ಡಾ. ಅನಿಲಕುಮಾರ ಎಸ್. | 30 | 08 |
| 30.09.2020 | ಮನುಷ್ಯನ ಆರೋಗ್ಯಕ್ಕೆ ಸಿರಿಧಾನ್ಯಗಳು ಮತ್ತು ಆಯುರ್ವೇದ ಕಶಾಯಗಳ ಮಹತ್ವ | ಡಾ. ನಾಗರಾಜ, ಜೈವಿಕ ವಿಜ್ಞಾನಿ, ಕಾರ್ನೆಲ್ ವಿಶ್ವವಿದ್ಯಾಲಯ, ಯು.ಎಸ್.ಎ. | ಡಾ. ಚಿಕ್ಕಣ್ಣ ಜಿ. ಎಸ್.<br>ಶ್ರೀ. ಕೆ. ತುಳಸಿರಾಮ್ | 98 | 05 |








## ಗುಂಪು ಚರ್ಚೆ



ಡಾ. ನಾಗರಾಜ ಕೆ.ಎಸ್, ವಿಜ್ಞಾನಿ (ತೋಟಗಾರಿಕೆ), ಕೃಷಿ ವಿಜ್ಞಾನ ಕೇಂದ್ರ, ಕೋಲಾರರವರು ವರ್ಗಾವಣೆಯಾಗಿದ್ದರಿಂದ ತಿಪ್ಪಸಂದ್ರ, ಮಾಲ್ಲೂರು (ತಾಲ್ಲೂಕ) ರೈತರನ್ನು ಪರಿಚಯಿಸಲು ಮತ್ತು ಪ್ರಸಕ್ತ 2020–21ನೇ ಸಾಲಿನಲ್ಲಿ ಹಮ್ಮಿಕೊಳ್ಳಬೇಕಾದ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಮರುಪರಿಶೀಲನೆ ಮತ್ತು ತರಬೇತಿ ಕಾರ್ಯಕ್ರಮಗಳ ಕುರಿತು ಗುಂಪುಚರ್ಚೆಯನ್ನು ದಿನಾಂಕ 13.07.2020 ರಂದು ಹಮ್ಮಿಕೊಳ್ಳಲಾಗಿತ್ತು. 15 ಜನ ರೈತರು ಮತ್ತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಅನಿಲಕುಮಾರ ಎಸ್, ಡಾ. ಜ್ಯೋತಿ ಕಟ್ಟೇಗೌಡರ್ ಮತ್ತು ಡಾ ಚಿಕ್ಕಣ್ಣ ಜಿ. ಎಸ್. ರವರು ಭಾಗವಹಿಸಿ ಗ್ರಾಮದ ಬೆಳೆಗಳು, ಮಾರುಕಟ್ಟೆ ಮತ್ತು ಸಂಸ್ಕರಣೆಯ ಬಗ್ಗೆ ಚರ್ಚಿಸಿದರು.



ದಿನಾಂಕ: 20.07.2020 ರಂದು ಪ್ರಸಕ್ತ 2020–21ನೇ ಸಾಲಿನ ವಿವಿಧ ಮುಂಚೂಣಿ ಪ್ರಾತ್ಯಕ್ಷಿಕೆಗಳು ಮತ್ತು ಕ್ಷೇತ್ರ ಮರುಪರಿಶೀಲನೆ ಕಾರ್ಯಕ್ರಮಗಳಿಗೆ ರೈತರನ್ನು ಗುರುತಿಸಲು ಮತ್ತೊಂದು ಗುಂಪುಚರ್ಚೆಯನ್ನು ಸುಮಾರು 30 ಜನ ರೈತರೊಂದಿಗೆ ಕೈಗೊಳ್ಳಲಾಯಿತು.

ದಿನಾಂಕ 27.08.200 ರಂದು ಡಾ. ಶಶಿಧರ ಕೆ.ಆರ್, ವಿಜ್ಞಾನಿ (ರೇಷ್ಮೆಕೃಷಿ) ರವರು ರೇಷ್ಮೆ ಇಲಾಖೆ ಸಹಯೋಗದಲ್ಲಿ ಕೋಲಾರ ತಾಲ್ಲೂಕಿನ ದಿನ್ನೆಹೊಸಹಳ್ಳಿ, ಪುರಹಳ್ಳಿಯಲ್ಲಿ 15 ಜನ ರೈತರನ್ನು ಒಳಗೊಂಡು ಹಿಪ್ಪುನೇರಳೆ ಬೆಳೆಯಲ್ಲಿ ನುಸಿ ಮತ್ತು ಹೇನುಗಳ ಸಮಗ್ರ ನಿರ್ವಹಣೆ ಕುರಿತು ಗುಂಪು ಚರ್ಚೆಯಲ್ಲಿ ಭಾಗವಹಿಸಿದ್ದರು.

## ರೇಡಿಯೋ ಕಾರ್ಯಕ್ರಮ



ನಮ್ಮ ಧ್ವನಿ –ಮೈರಾಡಾ ಸಮುದಾಯ ರೇಡಿಯೋ ರವರು ಸಂಘಟಿಸಿದ ಕೃಷಿಯಲ್ಲಿ ನೀರು ಮತ್ತು ಮಣ್ಣಿನ ಸಂರಕ್ಷಣೆ ನೇರ ಫೋನ ಇನ್ ಕಾರ್ಯಕ್ರಮದಲ್ಲಿ ಡಾ. ಅನಿಲಕುಮಾರ್ ಎಸ್, ಡಾ. ಅಂಬಿಕಾ ಡಿ.ಎಸ್ ಮತ್ತು ಡಾ. ಶಶಿಧರ್ ಕೆ.ಆರ್ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ರೈತರ ಪ್ರಶ್ನೆಗಳಿಗೆ ಉತ್ತರಿಸಿದರು ಮತ್ತು ವಿವಿಧ ತೋಟ, ಗದ್ದೆ ಮತ್ತು ಮನೆಗಳಲ್ಲಿ ನೀರಿನ ಕೊಯ್ಲು ಬಗ್ಗೆ ತಿಳಿಸಿಕೊಟ್ಟರು.

## ಕೈಗೊಂಡ ಪದ್ಧತಿ ಪ್ರಾತ್ಯಕ್ಷಿಕೆಗಳು








| ಅ.ನಂ | ದಿನಾಂಕ | ವಿಷಯ | ಸ್ಥಳ | ಕೈಗೊಂಡ ವಿಜ್ಞಾನಿ |
|---|---|---|---|---|
| 1. | 03.07.2020 | ಅಜೋಸ್ಪೇರಿಲಮ್ ನಿಂದ ರಾಗಿ ಬೀಜೋಪಚಾರ | ಯಡಹಳ್ಳಿ, ಕೋಲಾರ ತಾಲ್ಲೂಕ | ಡಾ. ಅನಿಲಕುಮಾರ್ ಎಸ್ |
| 2. | 08.07.2020 | ಹಿಪ್ಪುನೇರಳೆ ಬೆಳೆಯ ತ್ಯಾಜ್ಯದಿಂದ ಕಾಂಪೋಸ್ಟ್ ಉತ್ಪಾದನೆ | ಚಿಟ್ನಹಳ್ಳಿ, ಕೋಲಾರ ತಾಲ್ಲೂಕ | ಡಾ. ಶಶಿಧರ್ ಕೆ.ಆರ್ |
| 3. | 08.07.2020 | ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಊಜಿ ನೊಣ ನಿರ್ವಹಣೆಗಾಗಿ ಲಿಂಗಾಕರ್ಷಕ ಬಲೆಗಳ ಅಳವಡಿಕೆ | ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಡಾ. ಶಶಿಧರ್ ಕೆ.ಆರ್ |
| 4. | 15.07.2020 | ರೇಷ್ಮೆಹುಳುಗಳ ಜ್ವರಕ್ಕಿಂತ ಮೊದಲು ಹಾಗೂ ನಂತರ ರೇಷ್ಮೆ ಹುಳು ಹಾಸಿಗೆಗೆ ಸೊಂಕು ನಿವಾರಕ ಧೂಳೀಕರಿಸುವುದು | ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಡಾ. ಶಶಿಧರ್ ಕೆ.ಆರ್ |
| 5. | 16.07.2020 | ಮಾವಿನಲ್ಲಿ ಸವರುವಿಕೆ | ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಡಾ. ಜ್ಯೋತಿ ಕಟ್ಟೇಗೌಡರ |
| 6. | 28.07.2020 | ರೇಷ್ಮೆ ಹುಳು ಪಾಲನೆ ಮನೆಯಲ್ಲಿ ಊಜಿ ನೊಣ ನಿರ್ವಹಣೆಗಾಗಿ ಲಿಂಗಾರ್ಷಕ ಬಲೆಗಳ ಅಳವಡಿಕೆ | ಮುಚ್ಚನೂರು, ಬಂಗಾರಪೇಟೆ. | ಡಾ. ಶಶಿಧರ್ ಕೆ.ಆರ್ |
| 7. | 26.08.2020 | ಟೊಮ್ಯಾಟೊ ಬೆಳೆಯಲ್ಲಿ ಟ್ಯೂಟ  ಕೀಟದ ನಿರ್ವಹಣೆಗೆ ಮೋಹಕ ಬಲೆಗಳ ಅಳವಡಿಕೆ | ಯಡಹಳ್ಳಿ, ಕೋಲಾರ ತಾಲ್ಲೂಕ | ಡಾ. ಅಂಬಿಕಾ ಡಿ.ಎಸ್ |
| 8. | 03.09.2020 | ಬಳ್ಳಿ ಬೀನ್ಸ್ ನಲ್ಲಿ ನಂಜಾಣು ರೋಗದ ನಿರ್ವಹಣೆಗೆ ಹಳದಿ ಅಂಟು ಬಲೆಗಳ ಅಳವಡಿಕೆ | ತಿಮ್ಮಸಂದ್ರ, ಮಾಲುರು ತಾಲ್ಲೂಕು | ಡಾ. ಜ್ಯೋತಿ ಕಟ್ಟೇಗೌಡರ |
| 9. | 08.09.2020 | ಮಾವಿನಲ್ಲಿ ಕಾಂಡಕೋರಕದ ನಿರ್ವಹಣೆಗೆ ಪ್ರತಿ ಲೀಟರ್ ನೀರಿಗೆ 40 ಗ್ರಾಂ ಕೊಪರ್ ಆಕ್ಸಿ ಕ್ಲೋರೈಡ್ ಮತ್ತು 10 ಮಿ. ಲಿ ಡೈಕ್ಲೋರೊವಾಸ್ ಮಿಶ್ರಣ ವನ್ನು ಕಾಂಡಕ್ಕೆ ಲೇಪಿಸುವುದು | ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಡಾ. ಜ್ಯೋತಿ ಕಟ್ಟೇಗೌಡರ |
| 10. | 11.09.2020 | ರೇಷ್ಮೆ ಹುಳು ಪಾಲನೆ ಮನೆಯ ವೈಜ್ಞಾನಿಕ ಸೋಂಕುನಿರ್ವಹಣೆ | ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಡಾ. ಶಶಿಧರ್ ಕೆ.ಆರ್ |






## ಪರಂಪರಾಗತ ಕೃಷಿ ವಿಕಾಸ ಯೋಜನೆ (ಪಿಕೆವಿವೈ)



ಮಣ್ಣು ಫಲವತ್ತತೆಯನ್ನು ಸುಧಾರಿಸುವ ವಿಧಾನಗಳ ಕುರಿತು ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ದಿನಾಂಕ: 09.07.2020 ರಂದು ಕಾಡುದೇವಾಂಡಹಳ್ಳಿಯಲ್ಲಿ ಶ್ರೀ. ಕೆ. ತುಳಸಿರಾಮ್‌ರವರು ರೈತರ ಜೊತೆ ಸಂವಾದ ನಡೆಸಿದರು. ಸುಮಾರು 15 ರೈತರು ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ತದನಂತರ ದಿನಾಂಕ 11.07.2020 ರಂದು ಮಾವಿನಲ್ಲಿ ಕೊಯ್ಲೋತ್ತರ ನಿರ್ವಹಣೆಗಳ ಕುರಿತು ಅಂದರೆ ಸವರುವಿಕೆ, ಉಳುಮೆ ಮಾಡುವುದು, ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಸಿರು ಎಲೆಗೊಬ್ಬರಗಳ ಬಳಕೆ ಕುರಿತು ಅರಿವು ಕಾರ್ಯಕ್ರಮವನ್ನು ಕಾಡುದೇವಾಂಡಹಳ್ಳಿಯಲ್ಲಿ ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು 20 ಜನ ರೈತರು ಭಾಗವಹಿಸಿದ್ದರು. ದಿನಾಂಕ: 22.07.2020 ರಂದು ಮಾವಿನಲ್ಲಿ ಸವರುವಿಕೆಯನ್ನು ಕಾಡುದೇವಾಂಡಹಳ್ಳಿಯಲ್ಲಿ ಪರೀಕ್ಷಿಸಿದರು. ಹಸಿರೆಲೆ ಗೊಬ್ಬರ ಹಾಗೂ ಹೊದಿಕೆ ಕಾರ್ಯಾಚರಣೆಗಳನ್ನು ದಿನಂಕ: 07.09.2020 ರಂದು ಜನಪನ ಹಳ್ಳಿ ಮತ್ತು ಗುಮ್ಮರೆಡ್ಡಿಪುರ ಗ್ರಾಮಗಳಲ್ಲಿ ಶ್ರೀ. ಕೆ. ತುಳಸಿರಾಮ್‌ರವರು ಗಮನಿಸಿ, ಸೂಕ್ತ ಸಲಹೆಗಳನ್ನು ನೀಡಿದರು.

ದಿನಾಂಕ 19.09.2020 ರಂದು ಕಾಡುದೇವಾಂಡಹಳ್ಳಿಯಲ್ಲಿ ಮಾವಿನ ಪದ್ಧತಿ ಪ್ರಾತ್ಯಕ್ಷತೆ ತೋಟಗಳನ್ನು ಶ್ರೀ. ಕೆ. ತುಳಸಿರಾಮ್ ಮತ್ತು ಡಾ. ಚಿಕ್ಕಣ್ಣ ಜಿ.ಎಸ್ ರವರು ಪರಿಶೀಲಿಸಿದರು. ಕೋಡಿಚೆರುವು, ಹೊಳುರು ಮತ್ತು ತೋಟ್ಟಿಗಾನಹಳ್ಳಿಯಲ್ಲಿ ಮಾವಿನ ತೋಟವನ್ನು ಮತ್ತು ಮಾವಿನ ತೋಟದಲ್ಲಿ ಮಳೆಯಾಶ್ರಿತ ಭತ್ತದ ಗದ್ದೆಗಳನ್ನು ವೀಕ್ಷಿಸಿದರು. ಪುನಃ 23.09.2020 ರಂದು ಸೆಣಬು ಹೊದಿಕೆ ಹಾಗೂ ಡಿಕಂಪೋಸಿಂಗ್ ಏಜೆಂಟ್ಸ್ ಜೈವಿಕಗಳ ತಂತ್ರಜ್ಞಾನ ಮರುಪರಿಶೀಲನೆಯನ್ನು ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ವೀಕ್ಷಿಸಿದರು.



## ಅರಿವು ಕಾರ್ಯಕ್ರಮಗಳು



1. ಹವಾಮಾನ ಆಧಾರಿತ ಕೃಷಿ ಸಲಹೆ ಮತ್ತು ಮೆಘದೂತ್ ಧಾಮಿನಿ ಹಾಗೂ ಮೌಸಮ್ ಆ್ಯಪ್‌ಗಳ ಕುರಿತು ಕುಮಾರಿ ಸ್ವಾತಿ ಜಿ.ಆರ್, ವಿಷಯ ತಜ್ಞರು (ಕೃಷಿ ಹವಾಮಾನ ಶಾಸ್ತ್ರ) ಕಾಡುದೇವಾಂಡನಹಳ್ಳಿ ರೈತರಿಗೆ ದಿನಾಂಕ 11.09.2020 ರಂದು ತಿಳಿಸಿಕೊಟ್ಟರು.
2. ಸೂಲಿಬೇಲೆ, ಹೊಸಕೋಟೆ ತಾಲ್ಲೂಕಿನಲ್ಲಿ ಡಾ. ಶಶಿಧರ್ ಕೆ.ಆರ್ ರವರು ದ್ವಿತಳಿ ರೇಷ್ಮೆ ಉತ್ಪಾದನೆಯಲ್ಲಿ ಇತ್ತೀಚಿನ ತಂತ್ರಜ್ಞಾನಗಳ ಕುರಿತು ಅರಿವು ಕಾರ್ಯಕ್ರಮವನ್ನು ರೇಷ್ಮೆ ಇಲಾಖೆ, ಬೆಂಗಳೂರು ಗ್ರಾಮಾಂತರ ಜೊತೆಗೂಡಿ ದಿನಾಂಕ 11.09.2020 ರಂದು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಡಾ. ಅನಿಲಕುಮಾರ್ ಎಸ್. ರವರು ಭಾಗವಹಿಸಿದ್ದರು.
3. ಕುಮಾರಿ ಸ್ವಾತಿ ಜಿ.ಆರ್, ವಿಷಯ ತಜ್ಞರು (ಕೃಷಿ ಹವಾಮಾನ ಶಾಸ್ತ್ರ) ದಿನಾಂಕ 25.09.2020 ರಂದು ಜಿಲ್ಲಾ ಕೃಷಿ ಹವಾಮಾನ ಘಟಕ, ಕೋಲಾರದಿಂದ ಹವಾಮಾನ ಆಧಾರಿತ ಕೃಷಿ ಸಲಹೆಗಳ ಕುರಿತು ಕುಪ್ಪನಹಳ್ಳಿ, ಬಂಗಾರಪೇಟೆ ತಾಲ್ಲೂಕಿನ ರೇಷ್ಮೆ ಬೆಳೆಗಾರರಿಗೆ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 100 ಜನ ರೈತರಿಗೆ ಹವಾಮಾನ ಆ್ಯಪ್‌ಗಳಾದ ಮೆಘದೂತ್ ಧಾಮಿನಿ ಹಾಗೂ ಮೌಸಮ್‌ಗಳನ್ನು ಉಪಯೋಗಿಸಲು ಪ್ರೇರೆಪಿಸಿದರು.



## ಮುಂಚೂಣಿ ಪ್ರಾತ್ಯಕ್ಷಿಕೆ

ಕೋಲಾರ ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಆಧುನಿಕ ಹಾಗೂ ಸಮಗ್ರ ಬೆಳೆ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಮುಂಚೂಣಿ ಪ್ರಾತ್ಯೆಕ್ಷತೆಗಳನ್ನು ಗುರುತಿಸಲಾದ ಗ್ರಾಮಗಳಲ್ಲಿ ಪ್ರಾರಂಭಿಸಲಾಯಿತು.





| ಅ.ನಂ | ವಿಷಯ | ಗ್ರಾಮ | ವಿಜ್ಞಾನಿ |
|---|---|---|---|
| 1. | ರಾಗಿ – ಅಧಿಕ ಇಳುವರಿ ಮತ್ತು ಬರ ನಿರ್ವಹಣೆಗಾಗಿ ಹೊಸ ತಳಿ ಕೆ.ಎಂ.ಆರ್ –360 ಪರಿಚಯ | ಯಡಹಳ್ಳಿ (ಕೋಲಾರ ತಾ.), ತಿಮ್ಮಸಂದ್ರ (ಕೆ.ಜಿ.ಎಫ್. ತಾ) | ಡಾ. ಅನಿಲಕುಮಾರ್ ಎಸ್ |
| 2. | ಹುರುಳಿ – ಅಧಿಕ ಇಳುವರಿಗಾಗಿ CRIDA–18 ತಳಿಯ ಪರಿಚಯ | ತಿಮ್ಮಸಂದ್ರ (ಕೆ.ಜಿ.ಎಫ್. ತಾ) ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಅನಿಲಕುಮಾರ್ ಎಸ್ |
| 3. | ಟೊಮ್ಯಾಟೊ– ಸಮಗ್ರ ರೋಗ ಮತ್ತು ಕೀಟಗಳ ನಿರ್ವಹಣೆ | ಯಡಹಳ್ಳಿ (ಕೋಲಾರ ತಾ), ತಿಮ್ಮಸಂದ್ರ (ಬಂಗಾರಪೇಟೆ ತಾ) | ಡಾ. ಅಂಬಿಕಾ ಡಿ.ಎಸ್ |
| 4. | ಬಳ್ಳಿಬೀನ್ಸ್ – ಬೆಳೆಯ ಸಮಗ್ರ ನಿರ್ವಹಣೆಯಿಂದ ಹಳದಿ ನಂಜಾಣು ರೋಗದ ನಿರ್ವಹಣೆ | ತಿಪ್ಪಸಂದ್ರ (ಮಾಲೂರು ತಾ) | ಡಾ. ಜ್ಯೋತಿ ಕಟ್ಟೇಗೌಡರ್ |
| 5. | ಮಾವು– ಸಮಗ್ರ ಬೆಳೆ ನಿರ್ವಹಣೆ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಜ್ಯೋತಿ ಕಟ್ಟೇಗೌಡರ್ |
| 6. | ಹಿಪ್ಪುನೇರಳೆಯ ಅಧಿಕ ಇಳುವರಿಗೆ ಸಮಗ್ರ ಪೋಷಕಾಂಶಗಳ ನಿರ್ವಹಣೆ ಪ್ರಾತ್ಯಕ್ಷಿಕೆ | ಯಡಹಳ್ಳಿ (ಕೋಲಾರ ತಾ) | ಡಾ. ಶಶಿಧರ್ ಕೆ.ಆರ್ |
| 7 | ಹೆಚ್ಚುವರಿ ಆದಾಯಕ್ಕಾಗಿ ಹಿಪ್ಪುನೇರಳೆ ಮರಪದ್ಧತಿಯಲ್ಲಿ ಅವರೆ ಅಂತರಬೆಳೆ ಪ್ರಾತ್ಯಕ್ಷಿಕೆ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 8 | ಗುಣಮಟ್ಟದ ರೇಷ್ಮೆಗೂಡಿನ ಉತ್ಪಾದನೆಗೆ ಕೃಷ್ಣರಾಜ (FC2 X FC1) ಬೈವೋಲ್ಟಿನ್ ಸಂಕರಣ ತಳಿಯ ಪ್ರಾತ್ಯಕ್ಷಿಕೆ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 9 | ಬೈವೋಲ್ಟಿನ್ ರೇಷ್ಮೆಗೂಡಿನ ಅಧಿಕ ಇಳುವರಿಗೆ ರೇಷ್ಮೆಹುಳು ಸಾಕಾಣಿಕಾ ಮನೆಯಲ್ಲಿ ಮಂಜು ಗವಿಸುವ ತಾಂತ್ರಿಕತೆ ಪ್ರಾತ್ಯಕ್ಷಿಕೆ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್. |
| 10 | ಪೌಷ್ಟಿಕ ಕೈತೋಟ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಚಿಕ್ಕಣ್ಣ ಜಿ. ಎಸ್. |
| 11 | ತೋಗರಿಯಲ್ಲಿ ಸಮಗ್ರ ಪೀಡೆ ನೀರ್ವಹಣೆ | ಬಯ್ಯಪ್ಪನಹಳ್ಳಿ, ಯುರಿಗಿಲಿ, ಬುಸನಹಳ್ಳಿ | ಶ್ರೀ. ತುಳಸಿರಾಮ್ ಕೆ. |
| 12 | ಸಾವಯವ ಮಾವು ಕೃಷಿ (ಪಿಕೆವಿವೈ) | ಕಾಡುದೇವಾಂಡಹಳ್ಳಿ, ಹೋಳುರು, ಕೋಡಿಚೆರುವು, ಗುಂಡಮನತ್ತ | ಶ್ರೀ. ತುಳಸಿರಾಮ್ ಕೆ. |

ಪ್ರತಿ ವಾರ ವಿಜ್ಞಾನಿಗಳು ತಮ್ಮ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಭೇಟನೀಡಿ ಪ್ರಗತಿಯನ್ನು ಪರೀಶಿಲಿಸಿರುತ್ತಾರೆ ಹಾಗು ಸಮಸ್ಯೆಗಳಿಗೆ ಪರಿಹಾರವನ್ನು ನೀಡಿರುತ್ತಾರೆ.








## ಸಮಸ್ಯಾತ್ಮಕ ತಾಕಿನ ಭೇಟಿ



ಡಾ. ಶಶಿಧರ್ ಕೆ.ಆರ್ ವಿಜ್ಞಾನಿ (ರೇಷ್ಮೆಕೃಷಿ) ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಸಹಾಯಕ ರೇಷ್ಮೆ ನಿರ್ದೇಶಕರು, ಕೋಲಾರ ರವರು ದಿನಾಂಕ 12.08.2020 ರಂದು ಹೇನು ಮತ್ತು ನುಸಿಗಳಿಂದ ತೀವ್ರವಾಗಿ ಬಾಧೆಗೊಳಗಾದ ಹಿಪ್ಪುನೇರಳೆ ಬೆಳೆಯನ್ನು ಚಂಚಡೇನಹಳ್ಳಿ ಮತ್ತು ಚಲುವನಹಳ್ಳಿ, ಕೋಲಾರ ತಾಲ್ಲೂಕನಲ್ಲಿ ವೀಕ್ಷಿಸಿ ಸೂಕ್ತ ನಿರ್ವಹಣಾ ಕ್ರಮಗಳನ್ನು ಸೂಚಿಸಿದರು.



ದಿನಾಂಕ: 27.08.2020 ರಂದು ಕಾಜಿಕಲ್ಲಹಳ್ಳಿ ಮತ್ತು ದಿನ್ನೆಹೊಸಹಳ್ಳಿ, ಕೋಲಾರ ತಾಲ್ಲೂಕಿನಲ್ಲಿ ಡಾ. ಶಶಿಧರ್ ಮತ್ತು ರೇಷ್ಮೆ ಇಲಾಖೆ ಅಧಿಕಾರಿಗಳು ಜೊತೆಗೂಡಿ ಹೇನು ಮತ್ತು ನುಸಿಗಳಿಂದ ಬಾಧೆಗೊಳಗಾದ ಹಿಪ್ಪುನೇರಳೆ ಬೆಳೆಯನ್ನು ಪರಿಶೀಲಿಸಿ ಸೂಕ್ತ ನಿರ್ವಹಣಾ ಕ್ರಮಗಳನ್ನು ಸೂಚಿಸಿದರು.



ಶ್ರೀ. ಕೆ. ತುಳಸಿರಾಮ್‌ರವರು ದಿನಾಂಕ 09.09.2020 ರಂದು ಗದ್ದೆಕಣ್ಣೂರು ಮತ್ತು ಚತ್ರಕೋಡಿಹಳ್ಳಿ ಗ್ರಾಮಗಳಲ್ಲಿ ಸಹಾಯಕ ಕೃಷಿ ನೀರ್ದೇಶಕರು, ಕೋಲಾರ ಅವರೊಂದಿಗೆ ರಾಗಿ ತೋಟವನ್ನು ಭೇಟಿನೀಡಿ ವಿಕ್ಷೀಸಿ, ರಾಗಿಯಲ್ಲಿ ಭೌತಿಕ ಶುದ್ಧತೆ ಇಲ್ಲದಿರುವುದು ಮತ್ತು ಬೆಂಕಿ ರೋಗದ ಹತೋಟಿಗೆ ಸೂಕ್ತ ಕ್ರಮಗಳನ್ನು ಸೂಚಿಸಿದರು.

## ತಂತ್ರಜ್ಞಾನ ಮರುಪರಿಶೀಲನೆ







| ಅ.ನಂ | ವಿಷಯ | ಸ್ಥಳ | ವಿಜ್ಞಾನಿ |
|---|---|---|---|
| 1. | ಹಿಪ್ಪುನೇರಳೆ ಬೆಳೆಯ ಪೋಷಕಾಂಶಗಳ ನಿರ್ವಹಣೆಯಲ್ಲಿ ಪರಿಸರಸ್ನೇಹಿ ಎಲೆ ಸಿಂಪರಕಗಳ ಪರಿಶೀಲನೆ | ಕಾಡುದೇವಾಂಡಹಳ್ಳಿ (ಶ್ರೀನಿವಾಸಪುರ ತಾ) | ಡಾ. ಶಶಿಧರ್ ಕೆ.ಆರ್ |
| 2. | ಹಿಪ್ಪುನೇರಳೆ ಬೆಳೆಯ ತ್ಯಾಜ್ಯದಿಂದ ಕಾಂಪೋಸ್ಟ್ ಉತ್ಪಾದನೆ | ಚಿಟ್ನಹಳ್ಳಿ (ಕೋಲಾರ ತಾ) | ಡಾ. ಶಶಿಧರ್ ಕೆ.ಆರ್ |
| 3. | ಹಿರೇಕಾಯಿಯಲ್ಲಿ ಹಳದಿ ನಂಜುರೋಗದ ನಿರ್ವಹಣೆ | ತಿಪ್ಪಸಂದ್ರ (ಕೆ.ಜಿ.ಎಫ್. ತಾ) | ಡಾ. ಅಂಬಿಕಾ ಡಿ.ಎಸ್. |

## ಪ್ರಮುಖ ದಿನಗಳು



ದಿನಾಂಕ 20.08.2020 ರಂದು ಕೃಷಿ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗದವರು ಸದ್ಭಾವನಾ ದಿವಸದಲ್ಲಿ ಪಾಲ್ಗೊಂಡು ಪ್ರತಿಜ್ಞೆಯನ್ನು ಸ್ವಿಕರಿಸಿದರು.

## ಪಾರ್ಥೇನಿಯಂ ನಿರ್ಮೂಲನೆ ಅರಿವು ಕಾರ್ಯಕ್ರಮ



ಪಾರ್ಥೇನಿಯಂ ಒಂದು ವಿನಾಶಕಾರಿ ಕಳೆಯಾಗಿದ್ದು ಹಾಗು ಅತಿ ಹೆಚ್ಚಿನ ಪ್ರಮಾಣದಲ್ಲಿ ಪರಾಗ ಉತ್ಪಾದಿಸುವದರಿಂದ, ಬೆಳೆಗಳ ಇಳುವರಿ ಕುಂಠಿತ ಗೊಳ್ಳುತ್ತದೆ. ಪರಾಗರೇಣುಗಳು ವಾತಾವರಣದಲ್ಲಿ ಸೇರಿ ಉಸಿರಾಟದ ತೊಂದರೆ ಉಂಟಾಗುತ್ತದೆ. ಹಾಗು ಮಣ್ಣಿನ ಗುಣಮಟ್ಟಕ್ಕೆ ಹಾನಿ ಮಾಡುವದರಿಂದ ಈ ಕಳೆಯನ್ನು ಸಂಪೂರ್ಣ ವಿನಾಶ ಮಾಡುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಒಂದು ವಾರಗಳ ಕಾಲ ಪಾರ್ಥೇನಿಯಂ ನಿರ್ಮೂಲನೆ ಅರಿವು ಕಾರ್ಯಕ್ರಮವನ್ನು ಕೈಗೊಳ್ಳಲು ನಿರ್ದೇಶಿಸಿದ್ದರು. ಈ ಪ್ರಕಾರವಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.



ಮೊದಲನೇಯ ಕಾರ್ಯಕ್ರಮವನ್ನು ದಿನಾಂಕ 18.08.2020 ರಂದು ಡಾ. ಶಶಿಧರ್ ಕೆ.ಆರ್, ಡಾ. ಅಂಬಿಕಾ ಡಿ.ಎಸ್ ಮತ್ತು ಡಾ. ಅನಿಲಕುಮಾರ್ ಎಸ್ ರವರು ಜೊತೆಗೂಡಿ ಕಾಡುದೇವಾಂಡಹಳ್ಳಿಯಲ್ಲಿ ಆಯೋಜಿಸಿ ಪಾರ್ಥೇನಿಯಂನ ಸಮಗ್ರ ನಿರ್ವಹಣೆಯ ಕುರಿತು ಚರ್ಚಿಸಿದರು. ಸುಮಾರು 15 ಜನ ಯುವಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಎರಡನೇಯ ಕಾರ್ಯಕ್ರಮವನ್ನು ದಿನಾಂಕ 18.08.2020ರಂದು ಡಾ. ಅಂಬಿಕಾ ಡಿ.ಎಸ್, ಡಾ. ಶಶಿಧರ್ ಕೆ.ಆರ್ ಮತ್ತು ಡಾ. ಅನಿಲಕುಮಾರ್ ಎಸ್ ಜೊತೆಗೂಡಿ ಯಡಹಳ್ಳಿಯಲ್ಲಿ ಆಯೋಜಿಸಿ ಪಾರ್ಥೇನಿಯಂನ ಅವಗುಣಗಳು ಮತ್ತು ಮಾನವನ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಕುರಿತು ತಿಳಿಸಿಕೊಟ್ಟರು. ಸುಮಾರು 15 ಜನ ಯುವಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೂರನೇಯ ಕಾರ್ಯಕ್ರಮವನ್ನು ದಿನಾಂಕ 19.08.2020 ರಂದು ಕೆ.ವಿ.ಕೆ, ಕೋಲಾರದ ಎಲ್ಲ ಸಿಬ್ಬಂದಿಗಳ ಜೊತೆಗೂಡಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಆವರಣದಲ್ಲಿ ಪಾರ್ಥೇನಿಯಂ ಕಿತ್ತು ಸ್ವಚ್ಛಗೊಳಿಸಿದರು. 12 ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಪೋಷಣ ಮಾಹೆ



ಭಾರತದಲ್ಲಿ ಕುಪೋಷಣೆಯನ್ನು ತಡೆಗಟ್ಟಲು ಮತ್ತು ಪೌಷ್ಟಿಕಾಂಶಗಳ ಕುರಿತು ಮಾಹಿತಿ ಒದಗಿಸಲು ಸೆಪ್ಟೆಂಬರ್ ತಿಂಗಳಾದ್ಯಂತ ಪೋಷಣ ಅಭಿಯಾನ ಕಾರ್ಯಕ್ರಮಗಳನ್ನು ಕೋಲಾರ ಜಿಲ್ಲೆಯ ಎಲ್ಲಾ ತಾಲುಕುಗಳಲ್ಲಿ ಈ ಕೆಳಕಂಡ ದಿನಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮೊದಲನೆಯ ಕಾರ್ಯಕ್ರಮವನ್ನು ದಿನಾಂಕ 17.09.2020 ರಂದು ಕೆವಿಕೆ ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಶ್ರೀ. ಕೆ. ಶ್ರೀನಿವಾಸಗೌಡ ಶಾಸಕರು, ಕೋಲಾರ ಕ್ಷೇತ್ರ, ಕೋಲಾರವರು ಸಭೆಯನ್ನು ಉದ್ಘಾಟನೆ ಮಾಡಿ 72 ಜನ ಅಂಗನವಾಡಿ ಕಾರ್ಯಕರ್ತರು, 30 ರೈತ ಮಹಿಳೆಯರು ಮತ್ತು 26 ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಡಾ. ಚಿಕ್ಕಣ್ಣ ಜಿ. ಎಸ್. ರವರು ಜೀವ ವೈವಿಧ್ಯಕರಿಸಿದ ವಿವಿಧ ಬೆಳೆಗಳ ತಳಿಗಳ ಕುರಿತು ವಿವರಿಸಿದರು. ಡಾ. ಜ್ಯೋತಿ ಕಟ್ಟೇಗೌಡರ್ ರವರು ಪೌಷ್ಟಿಕ ಕೈತೋಟದಲ್ಲಿ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳ ಕುರಿತು ತಿಳಿಸಿದರು.



ದಿನಾಂಕ 21.09.2020 ರಂದು ಕೇತಗಾನಹಳ್ಳಿ, ಬಂಗಾರಪೇಟೆ ತಾಲ್ಲೂಕಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜೊತೆಗೂಡಿ, ಪೋಷಣ್ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಿದ್ದು, ಶ್ರೀ. ಕೆಂಪಯ್ಯ, ಆಡಳಿತಾಧಿಕಾರಿ, ಕೇತಗಾನಹಳ್ಳಿ ಪಂಚಾಯತಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ವಿವಿಧ ಅನ್ನಾಂಗಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ರಮ್ಯ, ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು. ಡಾ. ಶಿವಕುಮಾರ್, ಪ್ರಾಧ್ಯಾಪಕರು, ಸಮತೋಲಿತ ಆಹಾರ, ಡಾ. ಚಿಕ್ಕಣ್ಣರವರು ಅಪೌಷ್ಟಿಕತೆಯ ಕಾರಣಗಳು ಮತ್ತು ಡಾ. ಜ್ಯೋತಿ ಕಟ್ಟೆಗೌಡರ್‌ವರು ಕೈತೋಟದಲ್ಲಿ ವಿವಿಧ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ಚರ್ಚಿಸಿದರು. ಸುಮಾರು 98 ಜನ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.

- ತದನಂತರ ಇದೇ ರೀತಿಯಲ್ಲಿ ದಿನಾಂಕ: 22.09.2020 ರಂದು ಕಾಡುದೇವಾಂಡಹಳ್ಳಿ, ಶ್ರೀನಿವಾಸಪುರ ತಾಲ್ಲೂಕ, ದಿನಾಂಕ 22.09.2020 ರಂದು ಯಡಹಳ್ಳಿ, ಕೋಲಾರ ತಾಲ್ಲೂಕಿನಲ್ಲಿ ದಿನಾಂಕ. 24.9.2020 ರಂದು ಮುಡಿಯನೂರು, ಮುಳಬಾಗಿಲು ತಾಲ್ಲೂಕ, ದಿನಾಂಕ 28.09.2020 ರಂದು ಬೇತಮಂಗಲ ಕೆ.ಜಿ.ಎಫ್. ತಾಲ್ಲೂಕಿನಲ್ಲಿ ಪೋಷಣ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ಚಿಕ್ಕಣ್ಣ ಜಿ. ಎಸ್. ರವರು ಜೀವ ವೈವಿಧ್ಯಕರಿಸಿದ ವಿವಿಧ ಬೆಳೆಗಳ ತಳಿಗಳು ಮತ್ತು ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು.



- ದಿನಾಂಕ: 30.09.2020 ರಂದು ಸಮಾರೋಪ ಸಮಾರಂಭವನ್ನು ಕೃಷಿ ವಿಜ್ಞಾನ ಕೇಂದ್ರ, ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ಎಂ.ಜಿ. ಪಾಲಿ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೋಲಾರವರು ಮಾತನಾಡಿ, ಸಮಗ್ರ ಪೋಷಕಾಂಶಗಳ ಉಪಯೋಗ ಮತ್ತು ಬಳಕೆಯ ಬಗ್ಗೆ ತಿಳಿಸಿಕೊಟ್ಟರು. ಡಾ. ನಾಗರಾಜ ಗಣಾಚಾರಿ ರವರು ಉತ್ತಮ ಆರೋಗ್ಯಕ್ಕೆ ಸಿರಿಧಾನ್ಯ ಮತ್ತು ಆಯುರ್ವೇದ ಕಷಾಯ ಸೇವನೆ ಕುರಿತು ವಿಷಯ ಮಂಡಿಸಿದರು. ಡಾ. ಚಿಕ್ಕಣ್ಣ ಜಿ.ಎಸ್, ವಿಜ್ಞಾನಿ, ರವರು ಪೌಷ್ಠಿಕಾಂಶದಲ್ಲಿ ಜೈವಿಕ ಬಲವರ್ಧಿತ ತಳಿಗಳು ಮತ್ತು ಡಾ. ಜ್ಯೋತಿ ಕಟ್ಟೇಗೌಡರ, ವಿಜ್ಞಾನಿ ರವರು ಕೈತೋಟದಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನಾ ಕ್ರಮಗಳ ಕುರಿತು ತಿಳಿಸಿಕೊಟ್ಟರು.



## 150ನೇ ಗಾಂಧೀಜಿರವರ ಜನ್ಮದಿನಾಚರಣೆ



ಗಾಂಧೀಜಿಯವರ 150ನೇ ಜನ್ಮದಿನಾಚರಣೆ ಅಂಗವಾಗಿ ಒಂದು ವಾರಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ: 26.09.2020 ರಂದು ಚೊಕ್ಕರೆಡ್ಡಿಹಳ್ಳಿ ಶ್ರೀನಿವಾಸಪುರ ತಾಲ್ಲೂಕು, ದಿನಾಂಕ: 29.09.2020 ರಂದು ಸರ್ಕಾರಿ ಪ್ರಾಥಮಿಕ ಶಾಲೆ, ತಿಮ್ಮಸಂದ್ರ, ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಹಾಗೂ ದಿನಾಂಕ 29.09.2020 ರಂದು ಸರ್ಕಾರೀ ಹಿರಿಯ ಪ್ರಾಥಮಿಕ ಶಾಲೆ, ಯಡಹಳ್ಳಿ ಮಕ್ಕಳಿಗೆ ಯೋಗದ ಮಹತ್ವವನ್ನು ಯೋಗ ಮಾಡುವುದರ ಮೂಲಕ ತಿಳಿಸಿಕೊಟ್ಟರು.



## ಇತರೆ ಚಟುವಟಿಕೆಗಳು

ಗೌರವಾನ್ವಿತ ಪ್ರಧಾನ ಮಂತ್ರಿಗಳ ಕಿಸಾನ್ ಸಮ್ಮಾನ್ ಯೋಜನೆಯ ನೇರ ಅಂತರಜಾಲ ಕಾರ್ಯಕ್ರಮವನ್ನು ವೀಕ್ಷಿಸಲು ಕಾಡುದೇವಾಂಡಹಳ್ಳಿಯ ರೈತರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ದಿನಾಂಕ 09.08.2020 ರಂದು ಅನುವು ಮಾಡಿಕೊಟ್ಟಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 40 ರೈತರು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಶ್ರೀ. ತುಳಸಿರಾಮ್ ಕೆ. ಮತ್ತು ಡಾ. ಶಶಿಧರ್ ಕೆ.ಆರ್. ರವರು ಆಯೋಜಿಸಿದ್ದರು



ರಾಣಿ ಲಕ್ಷ್ಮೀಬಾಯಿ ಕೇಂದ್ರ ಕೃಷಿ ವಿಶ್ವವಿದ್ಯಾಲಯ, ಜಾನ್ಸಿಯ ಶೈಕ್ಷಣಿಕ ಮತ್ತು ಆಡಳಿತ ಕಟ್ಟಡಗಳ ಉದ್ಘಾಟನೆಯ ಅಂತರಜಾಲ ಕಾರ್ಯಕ್ರಮದಲ್ಲಿ ಯಡಹಳ್ಳಿ ಗ್ರಾಮದಲ್ಲಿ 38 ಜನ ರೈತರು ಭಾಗವಹಿಸಲು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ದಿನಾಂಕ: 29.08.2020 ರಂದು ಅನುವು ಮಾಡಿಕೊಟ್ಟಿತು. ಕೃಷಿ ವಿಜ್ಞಾನ ಕೇಂದ್ರದ 8 ಜನ ತಾಂತ್ರಿಕ ಸಿಬ್ಬಂದಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಡಾ. ಜ್ಯೋತಿ ಕಟ್ಟೇಗೌಡರ್ ಮತ್ತು ಡಾ. ಚಿಕ್ಕನಣ್ಣ ರವರು ಆಯೋಜಿಸಿದ್ದರು



ಗೌರವಾನ್ವಿತ ಪ್ರಧಾನ ಮಂತ್ರಿಗಳ ಮತ್ಸ್ಯ ಸಂಪದ ಯೋಜನೆ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಎಲ್ಲ ಸಿಬ್ಬಂದಿವರ್ಗದವರು ಅಂತರ್ಜಾಲದ ಮೂಲಕ ಭಾಗವಹಿಸಿದ್ದರು. ಜೊತೆಗೆ ತಿಪ್ಪಸಂದ್ರ ಗ್ರಾಮದ ರೈತರು ಅಂತರಜಾಲದ ಮೂಲಕ ಭಾಗವಹಿಸಲು ದಿನಾಂಕ 10.09.2020 ರಂದು ಡಾ. ಜ್ಯೋತಿ ಕಟ್ಟೇಗೌಡರವರು ಅನುವುಮಾಡಿಕೊಟ್ಟರು.



## ಪೌಷ್ಠಿಕ ಕೈತೋಟ

ದಿನಾಂಕ: 09.07.2020 ರಂದು ಡಾ. ಚಿಕ್ಕಣ್ಣ ಜಿ.ಎಸ್. ರವರು ಪೋಷಕ ಕೈತೋಟದ ಬಗ್ಗೆ ಮತ್ತು ಡಾ. ಮಾಧವಿ ರೆಡ್ಡಿ, ಮುಖ್ಯಸ್ಥರು, ಪೋಷಕಾಂಶ ಮತು ಆಹಾರ ಪದ್ಧತಿ ವಿಭಾಗ, ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ರವರು ಪೋಷಕಾಶಂಸಗಳ ನಿರ್ವಹಣೆ ಕುರಿತು ಚರ್ಚಿಸಿದರು.

ದಿನಾಂಕ 21.07.2020 ರಂದು ಪೊಷಕಾಂಶಗಳ ಕೈ ತೋಟವನ್ನು ಪದ್ಧತಿ ಪ್ರಾತ್ಯಕ್ಷತೆಯ ಮೂಲಕ ರೈತ ಕುಟುಂಬಗಳಿಗೆ ಪರಿಚಯಿಸಿದರು.




| | |
|---|---|
| ಸಂಪಾದಕರು | : ಕೆ. ತುಳಸಿರಾಮ್ |
| ಸಹ ಸಂಪಾದಕರು | : ಡಾ. ಜ್ಯೋತಿ ಕಟ್ಟೇಗೌಡರ |
| ಸಹಾಯಕ ಸಂಪಾದಕರು | : ಡಾ. ಅನೀಲ್ ಕುಮಾರ್. ಎಸ್. |
| | ಡಾ. ಅಂಬಿಕಾ ಡಿ. ಎಸ್. ಡಾ. ಶಶಿಧರ್ ಕೆ.ಆರ್ |
| | ಡಾ. ಚಿಕ್ಕಣ್ಣ ಜಿ.ಎಸ್ |
| | ಶ್ರೀ. ಉಮೇಶ ನಾಯ್ಕ ಕು. ಸ್ವಾತಿ ಜಿ. ಆರ್. |
| ಪುಟ ವಿನ್ಯಾಸ | : ಸಿ.ಎಸ್. ಜ್ಞಾನಸುಧಾ |
| ಅಕ್ಷರ ಜೋಡಣೆ | : ಸಾವಿತ್ರಿ ಜಿ. ರುದ್ರಾಪೂರ |
| ಸಹಾಯಕರು | : ರವಿಶಂಕರ್ ಹೆಚ್.ಎಂ. |

ಪ್ರಕಾಶಕರು
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ಕೋಲಾರ– 563 103.





ಪ್ರತಿ ಸೋಮವಾರ ರೈತರಿಗೆ ಪರಿಹಾರ
ಸ್ಥಳ: ಕೃಷಿ ವಿಜ್ಞಾನ ಕೇಂದ್ರ ಕೋಲಾರ.
ಸಮಯ: ಬೆಳಿಗ್ಗೆ 9.00 ರಿಂದ ಸಂಜೆ: 5.00